ಸಾಕ್ಷಿಗೆ ಪ್ರಮಾಣ ವಚನವನ್ನು ದಿಃ13-02-2026 ರಂದು ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ 2 ರಿಂದ 4 ನೇ ಪ್ರತಿವಾದಿ ಪರ ಶ್ರೀ ಆರ್ ಎಸ್ ಎಚ್ ವಕೀಲರಿಂದಃ**

37. ನಾನು ನಿ.ಪಿ-35 ಕ್ಕೆ ಸಂಬಂದಿಸಿದಂತೆ ಲೋಕಾಯುಕ್ತಕ್ಕೆ ಡಿಸೆಂಬರ್ 2018 ರಲ್ಲಿ ದೂರು ನೀಡಿರುತ್ತೇನೆ. ನಿ.ಪಿ-35 ರಂತೆ ದೂರು ನೀಡಿದ ಸ್ವಲ್ಪ ದಿನಗಳ ನಂತರ ನಾನು ಪ್ರತಿವಾದಿಗಳ ವಿರುದ್ಧ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿ. ನಿ.ಪಿ-35 ದೂರಿಗೆ ಸಂಬಂದಿಸಿದಂತೆ ವರದಿ ಬರುವ ಪೂರ್ವದಲ್ಲಿಯೇ ಈ ದಾವೆಯನ್ನು ಪ್ರತಿವಾದಿಯ ವಿರುದ್ಧ ಸಲ್ಲಿಸಾಗಿತ್ತು ಎಂದರೆ ಸರಿ. ನಿ.ಪಿ-35 ಕ್ಕೆ ಸಂಬಂದಿಸಿದಂತೆ ದಿಃ 06-02-2023 ರಂದು ವರದಿ ನನಗೆ ತಲುಪಿರುತ್ತದೆ. ನಿ.ಪಿ-35 ಕ್ಕೆ ಸಂಬಂದಿಸಿದಂತೆ ವರದಿ ಬಂದ ನಂತರ ಈ ದಾವೆಯಲ್ಲಿ ಸಾಕ್ಷಿ ವಿಚಾರಣೆಯನ್ನು ನಾವು ಪ್ರಾರಂಭಿಸಿರುತ್ತೇನೆ ಎಂದರೆ ಸರಿ. ನಿ.ಪಿ-35 ರಲ್ಲಿರುವ 5 ನೆ ಖಂಡಿಕೆ ಯಲ್ಲಿರುವ ಅಭಿಪ್ರಾಯವನ್ನು ನಾನು ತಿಳಿದುಕೊಂಡಿರುತ್ತೇನೆ. ನಿ.ಪಿ-35 ರಲ್ಲಿ ನಾನು ಸಾಧಿಸುವ ಓಣಿ ಇರುವುದಿಲ್ಲ ಎಂದು ಲೋಕಾಯುಕ್ತರವರು ವರದಿ ನೀಡಿರುತ್ತಾರೆ ಎಂದರೆ ಸಾಕ್ಷಿ ಸುಳ್ಳು ವರದಿ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಈ ದಾವೆಯಲ್ಲಿ ಓಣಿ ಇಲ್ಲದೇ ಇದ್ದರೂ ಸಹ ಓಣಿ ಇದೆ ಎಂದು ಸುಳ್ಳು ಸಾಧಿಸುತ್ತಿದ್ದೆನೆ ಎಂದರೆ ಸರಿಯಲ್ಲ.

38. ಸಾಕ್ಷಿಗೆ ಈ ಹಂತದಲ್ಲಿ OS No 4/2020 ರಲ್ಲಿ ವಾದ ಪತ್ರದ ದೃಡಿಕೃತ ಪ್ರತಿಯನ್ನು ತೋರಿಸಿದ್ದು, ಸದರಿ ದಾಖಲೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ನಿ.ಡಿ -1 ಎಂದು ಗುರುತಿಸಲಾಯಿತು.

39. ಈ ಪ್ರಕರಣದಲ್ಲಿ ಹೇಳಿರುವ ಓಣಿಯೇ ಬೇರೇ ಮತ್ತು OS No 4/2020 ರಲ್ಲಿ ಹೇಳಿರುವ ಓಣಿಯೇ ಬೇರೇ ಆಗಿರುತ್ತದೆ.

40. ಈ ಪ್ರಕರಣದ ದಾವಾಸ್ತಿಯಿಂದ OS No 4/2020 ರಲ್ಲಿ ಹೇಳಿರುವ ಓಣಿ ಸುಮಾರು 5 ಅಡಿ ಅಂತರದಲ್ಲಿ ಇರುತ್ತದೆ. ಈ ಪ್ರಕರಣದ ದಾವಾಸ್ತಿ ಹಾಗೂ OS No 4/2020 ರ ದಾವಾಸ್ತಿಯ ನಡುವೆ ಸರ್ವೆ ನಂ 264 ಮತ್ತು 265 ರ ಆಸ್ತಿಗಳು ಬರುತ್ತದೆ.

41. ಈ ದಾವೆಯ ಜೊತೆ ಸಲ್ಲಿಸಿರುವ ಹಾತ ನಕಾಶೆಯಲ್ಲಿ 1 ನೇ ವಾದಿಯ ಮನೆಯ ಉತ್ತರ ದಿಕ್ಕಿಗೆ 4 ನೇ ವಾದಿಯ ಮನೆ ಎಂದು ತೋರಿಸಿರುವುದು ತಪ್ಪಾಗಿರುತ್ತದೆ.

42. ಈ ದಾವೆಯ ಜೊತೆ ಸಲ್ಲಿಸಿರುವ ಹಾತ ನಕಾಶೆಯಲ್ಲಿ ಸದರಿ OS No 4/2020 ರಲ್ಲಿ ಹೇಳಿರುವ ಓಣಿ, 1 ನೇ ವಾದಿಯ ಮನೆಯ ಬಚ್ಚಲು ಮನೆಯಿಂದ ಈ ದಾವೆಯ ದಾವಾಸ್ತಿಗೆ

ಹೊಂದಿಕೊಂಡಂತೆ ಇರುತ್ತದೆ ಎಂದು ನುಡಿಯುತ್ತಾರೆ. ಈ ದಾವೆಯ ಜೊತೆ ಸಲ್ಲಿಸಿರುವ ಹಾತ ನಕಾಶೆಯಲ್ಲಿ ತೋರಿಸಿರುವ AB ಓಣಿಗೆ ಸಂಬಂದಿಸಿದಂತೆ ನಿ.ಪಿ-35 ರಂತೆ ಲೋಕಾಯುಕ್ತದಲ್ಲಿ ಪ್ರಕ್ರಿಯೆಗಳು ನಡೆದಿರುತ್ತವೆ ಎಂದರೆ ಸರಿ.

43. OS No 4/2020 ರಲ್ಲಿ ದಾವೆ ಜೊತೆ ಸಲ್ಲಿಸಿರುವ ಹಾತನಕಾಶೆಯಲ್ಲಿ ಈ ದಾವೆಯ ದಾವಾಸ್ತಿ ಕಂಡುಬರುವುದಿಲ್ಲ. ಸಾಕ್ಷಿಯು ಮುಂದುವರೆದು ಸದರಿ ಆಸ್ತಿ ಪ್ರತ್ಯೇಕವಾಗಿರುತ್ತದೆ ಎಂದು ನುಡಿಯುತ್ತಾರೆ.

44. ಈ ದಾವೆಗೆ ಸಂಬಂದಿಸಿದಂತೆ ಯಾವುದೇ ಓಣಿ ಇರುವುದಿಲ್ಲ, ಸದರಿ ಓಣಿಯನ್ನು ಪ್ರತಿವಾದಿಗಳು ಒತ್ತುವರಿ ಮಾಡಿರುವುದಿಲ್ಲ ಮತ್ತು ಸದರಿ ಓಣಿಗೆ ಸಂಬಂದಿಸಿದಂತೆ ನನಗೆ ಯಾವುದೇ ಹಕ್ಕು ಮತ್ತು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ನಾನು ಹೇಳಿದಂತೆ ಯಾವುದೇ ಓಣಿಯನ್ನು ಅತಿಕ್ರಮಿಸಿ ಯಾವುದೇ ಕಟ್ಟಡವನ್ನು ನಿರ್ಮಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮನೆಯ ಮುಂದೆ ಇರುವ 30X90 ಅಡಿ ಗಾಂವ ಠಾಣಾ ಜಾಗವನ್ನು ಪಡೆಯುವ ಸಲುವಾಗಿ ಪ್ರತಿವಾದಿಯ ವಿರುದ್ಧ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮನೆಯ ಮುಂದೆ ಇರುವ 30X90 ಅಡಿ ಗಾಂವ ಠಾಣಾ ಜಾಗದಲ್ಲಿ ನನಗೆ ಯಾವುದೇ ಹಕ್ಕು ಇರುವುದಿಲ್ಲ. ಸದರಿ ಆಸ್ತಿಯನ್ನು ಉಳಿದ ವಾದಿಗಳಿಗೆ ಕೊಡಬಾರದು ಎಂದು ಪ್ರತಿವಾದಿಯ ವಿರುದ್ದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇರುವುದಿಲ್ಲ.

(ನನ್ನ ಹೇಳಿಕೆ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ. ಸರಿ ಇದೆ,**

**ಸಹಿ ಇದೆ**

**ಸಿವಿಲ್ ನ್ಯಾಯಾಧೀಶರು ಸಿದ್ದಾಪುರ**